**OFFICE OF THE REGISTRAR GENERAL, HIGH COURT OF KARNATAKA AMBEDKAR VEEDHI, BENGALURU - 560 001.**

**NOTIFICATION No. LCA-II-360/2017 DATED 18.01.2018**

**RECRUITMENT OF CANDIDATES TO THE POST OF SOFTWARE TECHNICIANS**

**LAST DATE FOR SUBMISSION OF APPLICATION THROUGH ONLINE: 02.02.2018**

Online applications in the prescribed format are invited from applicants who are qualified, as on the last date fixed for submission of applications for recruitment of 09 posts of Software Technicians in Group 'A' cadre on the establishment of the Sub- Ordinate Courts by the High Court of Karnataka, Bengaluru, through the online link on

http://karnatakajudiciary.kar.nic.in/recruitment.asp.

1. **Method of Recruitment:**

   Selection of candidates will be made in accordance with the Government orders LAW 76 LAC 2013 dated 27/03/2013 and LAW 249 LAC 2017 dated 07.12.2017.

2. **Minimum Qualification:** A candidate must have passed in First Class by the recognized University in Bachelor of Engineering/ Bachelor of Technology in Electronics and Communications/ Computer Science/ Telecommunication/Instrumentation Technology/ Information Technology OR First Class in M.C.A. OR M.Sc (Computer Science/Electronics). If the grades are awarded by the University, the proper conversion table of CGPA, as approved by the concerned university shall be furnished at the time of document verification.

3. **Scale of Pay**: Rs.28100- 700- 28800- 800- 33600- 900-39000-1050-45300-1200-50100 plus allowances.

4. **Probation:** The applicant if appointed shall be initially on probation for a period of two years or for extended period, if necessary.

5. **Age limit**: (1) As on the last date of submission of application, the age limit is, minimum of 21 years for all categories and the maximum age limit is as under:-

    (a) 40 years in the case of a person belonging to Scheduled Caste or Scheduled Tribe or Category-I of other Backward Classes.

    (b) 38 years in the case of a person belonging to Category II-A or II-B or III-A or III–B of other Backward Classes; and

    (c) 35 years for others.

    (2) As per Rule 6 of the Karnataka Civil Services (General Recruitment) Rules, 1977, the maximum age limit for appointment as mentioned in the said rules will be enhanced to the extent mentioned in the following cases:-

    i. In case of candidate who is working or holding a post under the Government or a local authority or a Corporation established by a State Act or Central Act or established by the Government under a State Act or Central Act and owned or controlled by the Government by the number of years during which he/she is or was holding such post or ten years whichever is less;

ii. In case of candidate who is an ex-serviceman - by three years plus the number of years of service rendered by him in the Armed Forces of the Union;

iii. In case of a candidate who is physically handicapped - by ten years;

iv. In the case of a candidate who is widow - by ten years;

v. Notwithstanding anything contained in rule 6 of the Karnataka Civil Services (General Recruitment) Rule, 1977, in case of in service personnel working on contract basis in High Court of Karnataka or in any sub-ordinate Courts on the date of commencement of these rules, the maximum age limit for appointment shall deemed to be enhanced by the actual period of service on contract basis put in or maximum period of 10 years whichever is less.

(3) The minimum and maximum age limit will be as on the last Date fixed for applying online

6. **Selection Criteria**: A written test shall be conducted for 70 marks followed by viva-voce for 30 marks. The written test shall be conducted by way of objective type question paper with multiple choices of 1½ hours (ninety minutes). Only such candidate who secure a minimum of 35 Marks in the written test will be eligible for viva-voce. From among the candidates who are eligible for viva-voce as far as may be such number of candidates as is equal to five times, the number of vacancies notified, having regard to the number of vacancies in each reserved category, selected in the order of merit, shall be called for viva-voce.

7. **Work Place**: Selected Candidates may be posted to any of the District Head Quarters in the State of Karnataka and are liable to be transferred to any other District Head Quarters in public interest, as per policy decided by the High Court of Karnataka.

8. **Classification of Vacancies:**

**5 POSTS FOR RESIDUAL PARENT CADRE**

| Category | Women Candidates | Rural Candidates | Physically Challenged | Ex-servicemen | Kannada Medium | Displaced by Project | Unreserved | Total |
|---|---|---|---|---|---|---|---|---|
| Scheduled Caste | 1 | - | 1* | - | - | - | | 2 |
| Category-II (A) | - | - | 1* | - | - | - | - | 1* |
| General Merit | - | - | 1* | - | 1 | - | | 2 |
| Total | 1 | - | 3* | - | 1 | - | - | 5 |

* Mentioning of star mark against notified vacancies indicate that particular vacancy is carried forward as backlog.

**4 POSTS UNDER LOCAL CADRE (i.e., RESERVATION FOR HYDERABAD KARNATAKA REGION CANDIDATES UNDER ARTICLE 371(J) OF THE CONSTITUTION)**

| Category | Women Candidates | Rural Candidates | Physically Challenged | Ex-servicemen | Kannada Medium | Displaced by Project | Unreserved | Total |
|---|---|---|---|---|---|---|---|---|
| Scheduled Caste | - | - | - | - | - | - | 1* | 1* |
| Scheduled Tribe | - | - | - | - | - | - | 1* | 1* |
| Category I | - | - | - | - | - | - | 1* | 1* |
| General Merit | - | 1* | - | - | - | - | - | 1* |
| Total | - | 1* | - | - | | - | 3* | 4* |

* Mentioning of star mark against notified vacancies indicate that particular vacancy is carried forward as backlog.

9. **Method of Application and fee:** The method of Application shall be through online on the website http://karnatakajudiciary.kar.nic.in/recruitment.asp to be applied as per the instructions made available in the Annexure on the website. Applications sent by any other mode other than online will not be considered.

   **(a)** The candidate belongs to General Merit, II-A, II-B, III-A and III-B shall remit fee of Rs.750/-(Rupees seven hundred fifty only). The candidate belongs to

SC/ST/Category-I and Physically Challenged shall remit fee of Rs.500/- (Rupees five hundred only).

(i) Online Payment: On submission of online application, the candidates shall make the online payment of application fee by SBI online payment gateway mentioned in the online application.

OR

(ii) Challan Form: On submission of online application, the candidates shall download the challan through SBI online payment gateway link mentioned in the online application in PDF format and shall remit the prescribed fee in any branch of SBI. (System need to support PDF reader-like Adobe, Acrobat)

(b) Fee once paid shall not be refunded under any circumstances.

10. **Last date for submission of application/payment of fee:-**

(i) To register / submit online application: **02.02.2018**

(ii) For payment of fee through Online : **05.02.2018** till 11.59. p.m

OR

Payment through Challan **05.02.2018** till Banks working hours.

11. **Candidates Claiming Reservations:**

(a) Under SC/ ST, Category – I / II A / II B / III A / III B shall possess the certificate in the form as prescribed by the Government of Karnataka and issued by the competent Authority.

(b) Claiming reservation under Rural/ Physically Challenged/ Ex-Servicemen/ Kannada Medium/ Displaced by projects/ Widow candidates shall possess the Certificates issued by Competent Authorities.

(c) Candidates claiming reservation under Local Cadre shall possess the relevant certificate issued by the Competent Authority on or before the last date of applying online as prescribed under the Karnataka Public Employment (Reservation in appointment for Hyderabad-Karnataka Region) (Issue of Eligibility Certificates) Rules, 2013.

(d) The candidates claiming benefits under Sl. No. 11 (a), (b) and (c) above shall possess the relevant certificates, issued by the Competent Authorities while submitting the Online application and furnish at the time of verification of documents.

(e) Candidates who are in service of Union of India / State Governments and their undertaking shall possess the "No Objection Certificate" issued by the concerned Authority while submitting the Online application and furnish at the time of verification of documents.

(f) The Applicant shall scan his/her latest passport size photograph with white back ground (having 5 cm of length X 3.6 cm of breadth with max. size 50kb) and signature on white paper in black ball point pen (having 2.5cm of length X 7.5 cm of breadth with max. size 25kb) in .jpg format and upload the same, while submitting the Online application.

12. The candidates who called for the documents verification at the time of Viva-Voce shall furnish the necessary original documents with regard to Educational Qualification (SSLC or equivalent examination certificate to show the Date of Birth), Degree and Master Degree Marks Cards and Convocation Certificates, Caste Certificate, Certificates claiming reservations with regard to Rural/ Physically Challenged/ Widow and reservation claimed for "Local Cadre" for verification. On verification, if the information so furnished by the applicant in the application is found to be false, then their

candidature is liable for rejection and also they are liable for criminal prosecution for furnishing false information

13. Candidates called for Written Test/Viva-voce will have to appear for the same at their own cost.

14. If any applicant is found to attempt / obtain extraneous support by any means for candidature from any officials or non-officials, he/she will not be eligible for appointment.

**By Order of Hon'ble The Acting Chief Justice**

**Sd/-**

**(B. JAYANTHA KUMAR)**
**REGISTRAR (RECRUITMENT)**

**ಮಹಾ ವಿಲೇಖನಾಧಿಕಾರಿಯವರ ಕಛೇರಿ, ಕರ್ನಾಟಕ ಉಚ್ಚ ನ್ಯಾಯಾಲಯ,**

**ಅಂಬೇಡ್ಕರ್ ವೀದಿ, ಬೆಂಗಳೂರು–560 001**

**ಅಧಿಸೂಚನೆ ಸಂಖ್ಯೆ ಎಲ್.ಸಿ.ಎ – II 360/2017 ದಿನಾಂಕ 18.01.2018**

**ತಂತ್ರಾಂಶ ತಂತ್ರಜ್ಞರ (ಸಾಫ್ಟ್‌ವೇರ್ ಟೆಕ್ನೀಷಿಯನ್) ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇಮಕಾತಿ**

**ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 02.02.2018**

ಕರ್ನಾಟಕ ಉಚ್ಚ ನ್ಯಾಯಾಲಯವು, ಅಧೀನ ನ್ಯಾಯಾಲಯಗಳ–ಸಮೂಹ "ಎ" ಪದವೃಂದಕ್ಕೆ ಸೇರಿದ 09 ತಂತ್ರಾಂಶ ತಂತ್ರಜ್ಞರ (ಸಾಫ್ಟ್‌ವೇರ್ ಟೆಕ್ನೀಷಿಯನ್) ಹುದ್ದೆಗೆ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್ http://karnatakajudiciary.kar.nic.in/recruitment.asp ಮೂಲಕ ಸಲ್ಲಿಸಬಹುದು.

1. **ನೇಮಕಾತಿ ವಿಧಾನ:**

ಸರ್ಕಾರಿ ಆದೇಶ ಸಂಖ್ಯೆ ಲಾ 76 ಎಲ್‌ಎಸಿ 2013 ದಿನಾಂಕ 27.03.2013 ಮತ್ತು ಲಾ 249 ಎಲ್‌ಎಸಿ 2017 ದಿನಾಂಕ 07.12.2017ರ ಅನುಸಾರ ಅಭ್ಯರ್ಥಿಗಳ ಆಯ್ಕೆಯನ್ನು ಮಾಡಲಾಗುತ್ತದೆ.

2. **ಕನಿಷ್ಠ ವಿದ್ಯಾರ್ಹತೆ:** ಅಭ್ಯರ್ಥಿಯು ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಇಂಜಿನಿಯರಿಂಗ್ ಪದವಿ, ವಿದ್ಯುನ್ಮಾನ ತಂತ್ರಜ್ಞಾನ, ಗಣಕ ವಿಜ್ಞಾನ/ ದೂರ ಸಂಪರ್ಕ/ ಉಪಕರಣಗಳ ತಂತ್ರಜ್ಞಾನ/ಮಾಹಿತಿ ತಂತ್ರಜ್ಞಾನಗಳ ವಿಭಾಗದಲ್ಲಿ ಇಂಜನಿಯರಿಂಗ್ ಪದವಿಯನ್ನು ಅಥವಾ ಗಣಕ ವಿಜ್ಞಾನ/ವಿದ್ಯುನ್ಮಾನ ವಿಷಯಗಳಲ್ಲಿ ಎಂ.ಎಸ್‌ಸಿ. ಅಥವಾ ಎಂ.ಸಿ.ಎ. ಪದವಿಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರತಕ್ಕದ್ದು. ವಿಶ್ವವಿದ್ಯಾಲಯದಿಂದ ಗ್ರೇಡನ್ನು ನೀಡಿದ್ದಲ್ಲಿ ಸಿಜಿಪಿಯ ಸಮರ್ಪಕ ಪರಿವರ್ತನೆಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯವು ಅನುಮೋದಿಸಿದಂತೆ ಮೂಲ ದಾಖಲಾತಿಗಳ ಪರಿಶೀಲನಾ ವೇಳೆಯಲ್ಲಿ ಹಾಜರುಪಡಿಸತಕ್ಕದ್ದು.

3. **ವೇತನ ಶ್ರೇಣಿ:** ರೂ.–28100–700–28800–800–33600–900–39000–1050–45300– 1200–50100 ಮತ್ತು ಇತರೆ ಭತ್ಯೆಗಳು.

4. **<u>ಸೇವೆಯ ಅರ್ಹತಾ ಪರೀಕ್ಷಾ ಅವಧಿ:</u>** ಆಯ್ಕೆಯಾದ ಅಭ್ಯರ್ಥಿಗಳು ಮೊದಲ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದ ಪಕ್ಷದಲ್ಲಿ ವಿಸ್ತರಿಸಲಾಗುವ ಯಾವುದೇ ಅವಧಿಯವರೆಗೆ ಪರೀಕ್ಷಾರ್ಥಿಗಳಾಗಿರುತ್ತಾರೆ.

5. **<u>ವಯೋಮಿತಿ:</u>** (1) ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಸಲಾದ ಕೊನೆಯ ದಿನಾಂಕದಂದು ಕನಿಷ್ಠ 21 ವರ್ಷದವರಾಗಿರಬೇಕು ಮತ್ತು ಗರಿಷ್ಠ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು:

(a) ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೇ ಹಿಂದುಳಿದ ಜಾತಿಗಳ ಪ್ರವರ್ಗ–1ಕ್ಕೆ ಸೇರಿದ ಪಕ್ಷದಲ್ಲಿ ಅವರು ಗರಿಷ್ಠ 40 ವರ್ಷ ವಯಸ್ಸು ಮೀರಿರಬಾರದು.

(b) ಇತರೇ ಹಿಂದುಳಿದ ವರ್ಗಗಳ ಪ್ರವರ್ಗ '2ಎ' ಅಥವಾ '2ಬಿ' ಅಥವಾ '3ಎ' ಅಥವಾ '3ಬಿ'ಗೆ ಸೇರಿದ್ದಲ್ಲಿ ಗರಿಷ್ಠ 38 ವರ್ಷ ವಯಸ್ಸು ಮೀರಿರಬಾರದು;

ಮತ್ತು

(c) ಇತರೇ ಅಭ್ಯರ್ಥಿಗಳು 35 ವರ್ಷ ವಯಸ್ಸು ಮೀರಿರಬಾರದು.

(2) ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6ರ ಅನುಸಾರ ಈ ಕೆಳಗಿನ ಸಂದರ್ಭಗಳಲ್ಲಿ ಸದರಿ ನಿಯಮಗಳಲ್ಲಿ ನಿಗಧಿ ಪಡಿಸಿರುವ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಹೆಚ್ಚಿಸಲಾಗುವುದು:

(i) ಅಭ್ಯರ್ಥಿಯು, ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ ಅಥವಾ ಕೇಂದ್ರ ಅಧಿನಿಯಮದ ಅಡಿಯಲ್ಲಿ ಸರ್ಕಾರದ ಮೂಲಕ ಸ್ಥಾಪಿತವಾದ ಮತ್ತು ಸರ್ಕಾರದ ಅಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದಲ್ಲಿ ಅಥವಾ ಯಾವುದೇ

ಹುದ್ದೆಯನ್ನು ಹೊಂದಿದ್ದಲ್ಲಿ ಹಾಗೆ ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿಯ ಸಡಿಲಿಕೆಗೆ ಅರ್ಹರಾಗಿರುತ್ತಾರೆ.

(ii) ಮಾಜಿ ಸೈನಿಕರಿಗೆ, ಕೇಂದ್ರ ಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ವರ್ಷಗಳ ಜೊತೆಗೆ ಮೂರು ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

(iii) ಅಭ್ಯರ್ಥಿಯು ದೈಹಿಕ ಅಂಗವಿಕಲತೆ ಹೊಂದಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

(iv) ಅಭ್ಯರ್ಥಿಯು ವಿಧವೆಯಾಗಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಇರುತ್ತದೆ.

(v) ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ 6ನೇ ನಿಯಮದಲ್ಲಿ ಏನೇ ಇದ್ದರೂ ಅಭ್ಯರ್ಥಿಗಳು ಈ ಅಧಿಸೂಚನೆಯ ದಿನಾಂಕದಂದು ಕರ್ನಾಟಕ ಉಚ್ಚ ನ್ಯಾಯಾಲಯ ಅಥವಾ ಯಾವುದೇ ಅಧೀನ ನ್ಯಾಯಾಲಯದಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಪಕ್ಷದಲ್ಲಿ, ಹಾಗೆ ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿಯ ಸಡಿಲಿಕೆಗೆ ಅರ್ಹರಾಗಿರುತ್ತಾರೆ.

(3) ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕವನ್ನು ಆಧರಿಸಿರುತ್ತದೆ.

6. <u>**ಆಯ್ಕೆ ವಿಧಾನ:**</u> 70 ಅಂಕಗಳ ಲಿಖಿತ ಪರೀಕ್ಷೆ ಮತ್ತು 30 ಅಂಕಗಳ ಮೌಖಿಕ ಪರೀಕ್ಷೆಗಳನ್ನು ನಡೆಸಲಾಗುತ್ತದೆ. 1½ ಗಂಟೆ (90 ನಿಮಿಷಗಳು) ಅವಧಿಯ ಬಹು ಆಯ್ಕೆಯೊಂದಿಗೆ ವಸ್ತು ನಿಷ್ಠ ರೀತಿಯ ಪ್ರಶ್ನೆಗಳನ್ನು ಒಳಗೊಂಡಿರುವ ಲಿಖಿತ ಪರೀಕ್ಷೆಯನ್ನು ನಡೆಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಕನಿಷ್ಠ 35 ಅಂಕಗಳನ್ನು ಪಡೆದ ಅಭ್ಯರ್ಥಿಗಳು ಮಾತ್ರ ಮೌಖಿಕ ಪರೀಕ್ಷೆಗೆ

ಅರ್ಹರಾಗುತ್ತಾರೆ. ಮೌಖಿಕ ಪರೀಕ್ಷೆಗೆ ಅರ್ಹರಾಗಿರುವಂಥ ಅಭ್ಯರ್ಥಿಗಳಿಂದ ಸಾಧ್ಯವಾಗಬಹುದಾದಷ್ಟು, ಪ್ರತಿ ಮೀಸಲಾತಿ ಪ್ರವರ್ಗದಲ್ಲಿನ ಖಾಲಿ ಸ್ಥಾನಗಳ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು, ಅಧಿಸೂಚಿಸಿರುವ ಖಾಲಿ ಹುದ್ದೆಗಳ ಸಂಖ್ಯೆಗೆ 5 (ಐದು) ಪಟ್ಟು ಅಭ್ಯರ್ಥಿಗಳನ್ನು, ಅರ್ಹತೆಯ ಆಧಾರದ ಮೇಲೆ ಆಯ್ಕೆ ಮಾಡಿ ಮೌಖಿಕ ಪರೀಕ್ಷೆಗೆ ಕರೆಯತಕ್ಕದ್ದು.

7. **ಕಾರ್ಯಸ್ಥಾನ:** ಆಯ್ಕೆಯಾದ ಅಭ್ಯರ್ಥಿಗಳನ್ನು ಕರ್ನಾಟಕದ ಯಾವುದೇ ಜಿಲ್ಲಾ ಕೇಂದ್ರ ಸ್ಥಾನಗಳಿಗೆ ಕಾರ್ಯನಿರ್ವಹಿಸಲು ಸ್ಥಳನಿಯುಕ್ತಿ ಮಾಡಬಹುದು ಮತ್ತು ಸಾರ್ವಜನಿಕ ಹಿತಾಸಕ್ತಿಯ ಮೇಲೆ ಯಾವುದೇ ಜಿಲ್ಲಾ ಕೇಂದ್ರ ಸ್ಥಾನಗಳಿಗೆ ಕರ್ನಾಟಕ ಉಚ್ಚ ನ್ಯಾಯಾಲಯದ ಕಾರ್ಯನೀತಿಯ ಪ್ರಕಾರ ವರ್ಗಾವಣೆ ಮಾಡಬಹುದಾಗಿರುತ್ತದೆ.

**8. ಖಾಲಿ ಹುದ್ದೆಗಳ ವರ್ಗೀಕರಣ :**

**ಮೂಲವೃಂದದ 5 ಹುದ್ದೆಗಳು**

| ಪ್ರವರ್ಗ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ವಿಕಲ ಚೇತನರು | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಮೀಸಲು ರಹಿತ | ಒಟ್ಟು |
|---|---|---|---|---|---|---|---|---|
| ಪರಿಶಿಷ್ಟ ಜಾತಿ | 1 | – | 1* | – | – | – | – | 2 |
| ಪ್ರವರ್ಗ – II(ಎ) | – | – | 1* | – | – | – | – | 1* |
| ಸಾಮಾನ್ಯ | – | – | 1* | – | 1 | – | – | 2 |
| ಒಟ್ಟು | 1 | – | 3* | – | 1 | – | – | 5 |

(*) ಚಿಹ್ನೆಯು ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸಲಾಗಿದೆ.

**ಸ್ಥಳೀಯ ವೃಂದದ 4 ಹುದ್ದೆಗಳು (ಅಂದರೆ ಸಂವಿಧಾನದ 371–(ಜೆ) ಅನುಚ್ಛೇದದಡಿಯಲ್ಲಿ ಹೈದರಾಬಾದ್–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳಿಗೆ ಮೀಸಲಾತಿ)**

| ಪ್ರವರ್ಗ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ವಿಕಲ ಚೇತನರು | ಮಾಜಿ ಸೈನಿಕ | ಕನ್ನಡ ಮಾಧ್ಯಮ | ಯೋಜನಾ ನಿರಾಶ್ರಿತರು | ಮೀಸಲು ರಹಿತ | ಒಟ್ಟು |
|---|---|---|---|---|---|---|---|---|
| ಪರಿಶಿಷ್ಟ ಜಾತಿ | – | – | – | – | – | – | 1* | 1* |
| ಪರಿಶಿಷ್ಟ ಪಂಗಡ | – | – | – | – | – | – | 1* | 1* |
| ಪ್ರವರ್ಗ–I | – | – | – | – | – | – | 1* | 1* |
| ಸಾಮಾನ್ಯ | – | 1* | – | – | – | – | – | 1* |
| ಒಟ್ಟು | – | 1* | – | – | – | – | 3* | 4* |

(*) ಚಿಹ್ನೆಯು ಬ್ಯಾಕ್‌ಲಾಗ್ ಹುದ್ದೆಗಳನ್ನು ಸೂಚಿಸಲಾಗಿದೆ.

9. **ಅರ್ಜಿ ಮತ್ತು ಶುಲ್ಕವನ್ನು ಸಲ್ಲಿಸುವ ವಿಧಾನ:** ಅರ್ಜಿಯನ್ನು ಸಲ್ಲಿಸುವ ವಿಧಾನವು ವೆಬ್‌ಸೈಟ್‌ನ ಅನುಬಂಧದಲ್ಲಿ ಲಭ್ಯವಿರುವ ಮಾಹಿತಿಗಳಿಗೆ ಅನುಸಾರವಾಗಿ ಇರತಕ್ಕದ್ದು. ವೆಬ್‌ಸೈಟ್‌ನ http://karnatakajudiciary.kar.nic.in/recruitment.asp ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಆನ್‌ಲೈನ್ ಮೂಲಕವಲ್ಲದೆ ಇತರೆ ಯಾವುದೇ ವಿಧಾನದಲ್ಲಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

(ಎ) ಸಾಮಾನ್ಯ ವರ್ಗದ ಅಭ್ಯರ್ಥಿಗಳು ಹಾಗೂ ಇತರೆ ಪ್ರವರ್ಗದ ಅಭ್ಯರ್ಥಿಗಳಾದ, II–ಎ/ II–ಬಿ/ III–ಎ/ III–ಬಿ ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದಂತೆ ನಿಗದಿಪಡಿಸಿದ 750/– ರೂ.ಗಳು .(ಏಳು ನೂರು ಐವತ್ತು ರೂ.ಗಳು ಮಾತ್ರ) ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–I ಕ್ಕೆ ಸೇರಿದ ಹಾಗೂ ವಿಕಲಚೇತನ

ಅಭ್ಯರ್ಥಿಗಳು 500/– ರೂ.ಗಳು (ಐನೂರು ರೂ.ಗಳು ಮಾತ್ರ) ಅರ್ಜಿ ಶುಲ್ಕವನ್ನು, ಈ ಮುಂದಿನ ಯಾವುದೇ ವಿಧಾನಗಳ ಮೂಲಕ ಸಂದಾಯ/ ಪಾವತಿ ಮಾಡತಕ್ಕದ್ದು :

(i) ಆನ್‌ಲೈನ್ ಮೂಲಕ ಶುಲ್ಕ ಸಂದಾಯ: ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

ಅಥವಾ

(ii) ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ: ಅಭ್ಯರ್ಥಿಗಳು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಪಿ.ಡಿ.ಎಫ್ ನಮೂನೆಯಲ್ಲಿ ಚಲನ್‌ನನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡತಕ್ಕದ್ದು. (ನೀವು ಉಪಯೋಗಿಸುವ ಕಂಪ್ಯೂಟರ್ ಪಿ.ಡಿ.ಎಫ್ ಅಡೋಬ್–ರೀಡರ್, ಅಕ್ರೋಬ್ಯಾಟ್ ಸಪೋರ್ಟ್ ಹೊಂದಿರತಕ್ಕದು.

(ಬಿ) ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲ.

10. **ಅರ್ಜಿ ಸಲ್ಲಿಸಲು/ಶುಲ್ಕ ಸಂದಾಯ ಮಾಡಲು ಕೊನೆಯ ದಿನಾಂಕ :**

(i) ಆನ್‌ಲೈನ್ ಮೂಲಕ ನೋಂದಣಿಗಾಗಿ ಮತ್ತು ಅರ್ಜಿಯನ್ನು ಸಲ್ಲಿಸುವುದಕ್ಕಾಗಿ **02.02.2018**

(ii) ಆನ್‌ಲೈನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ **05.02.2018** ರ ರಾತ್ರಿ 11.59ರ ವರೆಗೆ

ಅಥವಾ

ಚಲನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ **05.02.2018** ರ ಬ್ಯಾಂಕ್‌ಗಳ ಕೆಲಸದ ವೇಳೆಯಲ್ಲಿ

11. **ಮೀಸಲಾತಿ ಕೋರುವ ಅಭ್ಯರ್ಥಿಗಳು :**

ಎ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ I/ II–ಎ/ II–ಬಿ/ III–ಎ/ III–ಬಿ ಪ್ರವರ್ಗಗಳ ಅಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರವು ನಿಗದಿಪಡಿಸಿದ ನಮೂನೆಯಲ್ಲಿ, ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

ಬಿ) ಗ್ರಾಮೀಣ/ ವಿಕಲಚೇತನ/ ಮಾಜಿಸೈನಿಕ/ ಕನ್ನಡ ಮಾಧ್ಯಮ/ ಯೋಜನಾ ನಿರಾಶ್ರಿತರು/ ವಿಧವೆ ಕೋಟಾದಲ್ಲಿ ಮೀಸಲಾತಿಯನ್ನು ಕೋರ ಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣ ಪತ್ರಗಳನ್ನು ಹೊಂದಿರತಕ್ಕದ್ದು.

ಸಿ) ಸ್ಥಳೀಯ ವೃಂದ (ಅನುಚ್ಛೇದ 371–ಜೆ ಅಡಿಯಲ್ಲಿನ ಹೈದರಾಬಾದ್–ಕರ್ನಾಟಕ ಪ್ರದೇಶ) ದಡಿಯಲ್ಲಿ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರಿ ಉದ್ಯೋಗ (ಹೈದರಾಬಾದ್–ಕರ್ನಾಟಕ ಪ್ರದೇಶ– ಅರ್ಹತಾ ಪ್ರಮಾಣ ಪತ್ರಗಳು) ನಿಯಮಗಳು, 2013ರಡಿಯಲ್ಲಿ ಗೊತ್ತುಪಡಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಂದು ಅಥವಾ ಅದಕ್ಕೂ ಮುಂಚಿತವಾಗಿಯೇ ಸಕ್ಷಮ ಪ್ರಾಧಿಕಾರವು ನೀಡುವ ಯುಕ್ತ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು.

ಡಿ) ಮೇಲಿನ ಕ್ರಮಸಂಖ್ಯೆ 11 (ಎ) (ಬಿ) ಮತ್ತು (ಸಿ) ಅಡಿಯಲ್ಲಿ ಸೌಲಭ್ಯಗಳನ್ನು ಕೋರಬಯಸುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರವು ನೀಡುವ ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಹೊಂದಿರತಕ್ಕದ್ದು ಮತ್ತು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಹಾಜರು ಪಡಿಸತಕ್ಕದ್ದು.

ಇ) ಕೇಂದ್ರ ಸರ್ಕಾರ /ರಾಜ್ಯ ಸರ್ಕಾರ ಮತ್ತು ಅವುಗಳ ಅಧೀನ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವಂತಹ ಅಭ್ಯರ್ಥಿಗಳು ಸಂಬಂಧಪಟ್ಟ ಪ್ರಾಧಿಕಾರವು ನೀಡಿರುವ

"ನಿರಾಕ್ಷೇಪಣಾ ಪ್ರಮಾಣಪತ್ರ"ಗಳನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಹೊಂದಿರತಕ್ಕದ್ದು ಮತ್ತು ದಾಖಲೆಗಳ ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

ಎಫ್) ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವಾಗ ಅಭ್ಯರ್ಥಿಯು (ಗರಿಷ್ಠ 50 ಕೆ.ಬಿ. ಅಳತೆ ಇರುವ 5 ಸೆಂ.ಮೀ. ಉದ್ದ x 3.6 ಸೆಂ.ಮೀ. ಅಗಲವಿರುವ) ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಬಿಳಿಯ ಹಿನ್ನಲೆಯುಳ್ಳ ಭಾವಚಿತ್ರವನ್ನು ಸ್ಕ್ಯಾನ್ ಮಾಡತಕ್ಕದ್ದು ಹಾಗೂ ಜೆ.ಪಿ.ಜಿ. ನಮೂನೆಯಲ್ಲಿ ಬಿಳಿ ಕಾಗದದ ಮೇಲೆ ಕಪ್ಪು ಬಾಲ್ ಪಾಯಿಂಟ್ ಪೆನ್ನಿನಲ್ಲಿ (2.5 ಸೆಂ.ಮೀ. ಉದ್ದ x 7.5 ಸೆಂ.ಮೀ. ಅಗಲವಿರುವ ಗರಿಷ್ಠ 25 ಕೆ.ಬಿ. ಪ್ರಮಾಣವಿರುವಂತೆ) ತನ್ನ ಸಹಿ ಮಾಡಿ ಸ್ಕ್ಯಾನ್ ಮಾಡತಕ್ಕದ್ದು ಹಾಗೂ ಅದನ್ನು ಅಪ್ ಲೋಡ್ ಮಾಡತಕ್ಕದ್ದು.

12. ಶೈಕ್ಷಣಿಕ ವಿದ್ಯಾರ್ಹತೆ, ಪದವಿ, ಸ್ನಾತಕೋತ್ತರ ಪದವಿಯ ಅಂಕಪಟ್ಟಿ, ಘಟಿಕೋತ್ಸವದ ಪ್ರಮಾಣ ಪತ್ರ, ಜಾತಿ, ಹುಟ್ಟಿದ ದಿನಾಂಕಗಳಿಗೆ ಸಂಬಂಧಿಸಿದ ಅವಶ್ಯಕ ಮೂಲ ದಾಖಲೆಗಳನ್ನು (ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಜನ್ಮ ದಿನಾಂಕ ಹೊಂದಿರುವ ಅಂಕಪಟ್ಟಿ) ಮತ್ತು ಗ್ರಾಮೀಣ/ ವಿಕಲಚೇತನ / ಮಾಜಿ ಸೈನಿಕ/ ಕನ್ನಡ ಮಾಧ್ಯಮ / ಯೋಜನಾ ನಿರಾಶ್ರಿತರು / ವಿಧವೆ ಮತ್ತು ಸ್ಥಳೀಯ ವೃಂದಕ್ಕಾಗಿ ಮೀಸಲಾತಿಯನ್ನು ಕೋರುವವರು ಸಂಬಂಧಿಸಿದ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು. ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳೆಂದು ಕಂಡುಬಂದಲ್ಲಿ ಆತನ/ ಆಕೆಯ ಅಭ್ಯರ್ಥಿಕೆಯು ರದ್ದಾಗುತ್ತದೆ ಮತ್ತು ಅವರ ವಿರುದ್ಧ ತಪ್ಪು ಮಾಹಿತಿಯನ್ನು ಒದಗಿಸಿರುವುದಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ವ್ಯವಹರಣೆಯನ್ನು ಜರುಗಿಸಲಾಗುವುದು.

13. ಲಿಖಿತ ಪರೀಕ್ಷೆಗೆ / ಮೌಖಿಕ ಸಂದರ್ಶನಕ್ಕೆ ಕರೆಯಲಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.

14. ಅಭ್ಯರ್ಥಿಗಳು ಅಭ್ಯರ್ಥಿಕೆಯ ಸಂಬಂಧದಲ್ಲಿ ಅಧಿಕಾರಿಗಳು ಅಥವಾ ಅಧಿಕಾರಯೇತರರಿಂದ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳನ್ನು ಅನರ್ಹಗೊಳಿಸಲಾಗುವುದು.

ಮಾನ್ಯ ಹಂಗಾಮಿ ಮುಖ್ಯನ್ಯಾಯಮೂರ್ತಿಗಳ ಆದೇಶಾನುಸಾರ,

ಸಹಿ/–
(ಬಿ. ಜಯಂತ ಕುಮಾರ)
ವಿಲೇಖನಾಧಿಕಾರಿ (ನೇಮಕಾತಿ)